ಹಾಡಲಾಗುವುದಿಲ್ಲ' ಎಂದು ನಯವಾಗಿ ತಿರಸ್ಕರಿಸಿದೆ. ಕಛೇರಿ ಮುಗಿಸಿ ಪತಿಯೊಂದಿಗೆ ನಡೆದುಕೊಂಡು ಹೋಗುವಾಗ, 'ಹಂಸಧ್ವನಿ ಹಾಡಲಾಗುವುದಿಲ್ಲ ಎಂದೆಯಲ್ಲ... ಯಾಕೆ? ಅವರು ನೊಂದುಕೊಂಡರೋ ಏನೋ?' ಎಂದು ಪತಿ ಪ್ರಶ್ನಿಸಿದರು. ನಾನು ಎರಡು ರಾಗಗಳ ಸಾಮ್ಯತೆಯನ್ನು ಹಾಡಿ ತೋರಿಸುತ್ತ, 'ಇದು ಸ್ವಲ್ಪ ಇರಿಸುಮುರಿಸು ಅನ್ನಿಸಿತು' ಎಂದು ವಿವರಿಸತೊಡಗಿದೆ. ಅವರಿಗೆ ವಿವರಿಸುತ್ತ, ಹಾಡುತ್ತಾ, ಪಕ್ಕನೆ, ಇವರೆಡೂ ರಾಗಗಳನ್ನು ಜೋಡಿಸಿ ಹೊಸರಾಗವೊಂದನ್ನು ಏಕೆ ಸಂಯೋಜಿಸಬಾರದು ಎಂದು ಅನಿಸಿತು. ತಕ್ಷಣವೇ, 'ಅರೇ, ನೀವು ಸ್ವಲ್ಪ ಸುಮ್ಮನಿರಿ... ನನಗೆ ಸ್ವಲ್ಪ ಸಮಯ ಕೊಡಿ' ಎಂದು ಏಕಾಂತದಲ್ಲಿ ಕುಳಿತೆ. ಆಗಲೇ ಮೂಡಿದ್ದು ನಂದಧ್ವನಿ ರಾಗ.

ರಾಗಗಳು ಅವಾಗಿಯೇ ನಮ್ಮೆಡೆಗೆ ಬರುತ್ತವೆ. ಕೆಲವೊಮ್ಮೆ ನಮ್ಮಿಬ್ಬರ ನಡುವೆ ಜಗಳವಾದಾಗಲೂ ಸುಮ್ಮನೇ ಕುಳಿತು ತಾನ್‌ಪುರ ಹಿಡಿದು ರಾಗಗಳನ್ನು ಸಂಯೋಜಿಸಿದ್ದೇನೆ. ಪ್ರತಿ ಸಂಯೋಜನೆಯ ಹಿಂದಿನ ಸನ್ನಿವೇಶಗಳು ಸುಂದರವಾದ ನೆನಪುಗಳು. ರಾಮಾಯಣ ಕಥೆಯನ್ನು ಆಧರಿಸಿ ಅನೇಕ ಬಂದಿಷ್ ರಚಿಸಿದ್ದೇನೆ. ಒಂದು ಕಥೆ ಹೇಳ್ತೇನೆ ಕೇಳಿ. ರಾಜ ದಶರಥನಿಗೆ ಮೂವರು ಪತ್ನಿಯರು. ಆದರೆ, ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಎಂಬ ನಾಲ್ವರು ಮಕ್ಕಳು ಹೇಗೆ ಹುಟ್ಟಿದರು? ಸುಮಿತ್ರಾದೇವಿಗೆ ಲಕ್ಷ್ಮಣ ಮತ್ತು ಶತ್ರುಘ್ನ ಎಂಬ ಇಬ್ಬರು ಅವಳಿ ಮಕ್ಕಳು. ರಾಜನು ಪುತ್ರಕಾಮೇಷ್ಟಿ ಯಾಗವನ್ನು ಮಾಡಿ ಪಾಯಸವನ್ನು ಕುಡಿದ ಮೇಲೆ, ಒಬ್ಬಳು ರಾಣಿಗೆ ಒಂದು ಮಗುವಾಗಬೇಕಲ್ಲವೇ ಎಂಬ ಪ್ರಶ್ನೆ ಮನದಲ್ಲಿ ಮೂಡಿತ್ತು. ಸಾಮಾನ್ಯವಾಗಿ ರಾಣಿಯರ ನಡುವಿನ ಅಸೂಯೆ, ಜಗಳಗಳ ಕಥೆಗಳೇ ಮುನ್ನೆಲೆಗೆ ಬರುತ್ತವೆ.

ಇಲ್ಲಿ ಅನೇಕ ರೀತಿಯ ಕಥೆಗಳಿವೆ. ಕೌಸಲ್ಯಾದೇವಿ ಪಟ್ಟದ ರಾಣಿಯಾದ್ದರಿಂದ ರಾಜನು ಮೊದಲು ಅವಳಿಗೆ ಪಾಯಸ ಕೊಡುತ್ತಾನೆ. ಕೈಕೇಯಿಯು ಮುದ್ದಿನ ಮಡದಿಯಾದ್ದರಿಂದ ನಂತರ ಅವಳಿಗೆ ಪಾಯಸ ಕೊಡುತ್ತಾನೆ. ಮಧ್ಯಮಳಾದ ಸುಮಿತ್ರಾದೇವಿಗೆ ಕೊಡಬೇಕೆನ್ನುವಷ್ಟರಲ್ಲಿ ಪಾಯಸ ಮುಗಿದೇ ಹೋಯಿತಂತೆ. ಇನ್ನೊಂದು ಕಥೆಯೆಂದರೆ, ಸುಮಿತ್ರಾದೇವಿಗೆ ಕೊಟ್ಟ ಪ್ರಸಾದವನ್ನು ಕಿಟಕಿಯಿಂದ ಬಂದ ಮಂಗವೊಂದು ಕಸಿದುಕೊಂಡು ಹೋಯಿತಂತೆ. ಮಂಗನಿಂದ ಪಡೆದ ಪಾಯಸವನ್ನು ಸೇವಿಸಿದ ಅಂಜನಾದೇವಿ ಹನೂಮಂತನಿಗೆ ಜನ್ಮ ನೀಡಿದಳು ಎನ್ನುತ್ತದೆ ಕಥೆ. ಅದೇನೇ ಇರಲಿ, ಒಟ್ಟಿನಲ್ಲಿ ಪ್ರಸಾದವೇ ಇಲ್ಲದೆ ದುಃಖಿತಳಾಗಿ ನಿಂತಿದ್ದ ಸುಮಿತ್ರಾ ದೇವಿಗೆ, ಕೌಸಲ್ಯಾದೇವಿ ಒಂದಿಷ್ಟು ಪ್ರಸಾದವನ್ನು ಕೊಡುತ್ತಾಳೆ. ಜೊತೆಗಾರ್ತಿ, ಮೃದುಭಾಷಿ ಸುಮಿತ್ರೆಗೆ ಪ್ರಸಾದ ಸಿಗಲಿಲ್ಲವೇ ಎಂದು ನೊಂದುಕೊಂಡು ಕೈಕೇಯಿಯೂ ಸ್ವಲ್ಪ ಪ್ರಸಾದವನ್ನು ಕೊಡುತ್ತಾಳೆ. ಹೀಗೆ ಎರಡು ಪಾಲು ಪ್ರಸಾದ ಸೇವಿಸಿದ ಸುಮಿತ್ರಾದೇವಿ ಇಬ್ಬರು ಪುತ್ರರಿಗೆ ಜನ್ಮ ನೀಡುತ್ತಾಳೆ. ಆದರೇನು, ಕೌಸಲ್ಯೆ ಕೊಟ್ಟ ಪ್ರಸಾದದ ಮೂಲಕ ಹುಟ್ಟಿದ ಮಗು ಲಕ್ಷ್ಮಣ ಸದಾ ರಾಮನ ಸಹಚರನಾಗಿಯೇ ಉಳಿಯುತ್ತಾನೆ. ಕೈಕೇಯಿ ಕೊಟ್ಟ ಪ್ರಸಾದದ ಮೂಲಕ ಹುಟ್ಟಿದ ಮಗ ಶತ್ರುಘ್ನ ಸದಾ ಭರತನ ಸಾಹಚರ್ಯವನ್ನೇ ಇಷ್ಟಪಡುತ್ತಾನೆ.

ಎಷ್ಟು ಚೆನ್ನಾಗಿದೆಯಲ್ಲವೇ ಈ ಕಥೆ? ಇಬ್ಬರು ರಾಣಿಯರು ಮೂರನೇ ರಾಣಿಯೊಡನೆ ಪಾಯಸವನ್ನು ಹಂಚಿಕೊಂಡರು ಎಂಬ ಔದಾರ್ಯವೇ ನನ್ನನ್ನು ಬಹಳ ಕಾಡಿತು. ರಾಣಿಯರ ನಡುವೆ ಅಸೂಯೆ, ಕೋಪ, ಅಧಿಕಾರ ದಾಹದ ಕಥೆಗಳನ್ನು ಕೇಳುತ್ತೇವೆ. ಆದರೆ, ಇಲ್ಲಿ ನೋಡಿ, ಅವರ ಹೃದಯ ವೈಶಾಲ್ಯತೆಯ ನಡೆಯು ಯಾರದ್ದೇ ಮನವನ್ನು ತಟ್ಟುತ್ತದೆ. ಇಬ್ಬರು ರಾಣಿಯರು ಸುಮಿತ್ರಾದೇವಿಯನ್ನು ಸಮಾಧಾನಪಡಿಸುತ್ತಾ, ನೀನೂ ಪ್ರಸಾದ ತಗೋ ಎಂದು ಕೊಡುವ ಪ್ರಸಂಗವನ್ನೇ ಆಧರಿಸಿ ನಾನು ಬಂದಿಷ್ ಒಂದನ್ನು ಬರೆದೆ. ಹೀಗೆ ನೂರಾರು ಬಂದಿಷ್‌ಗಳನ್ನು ಬರೆದದ್ದುಂಟು. ಅವುಗಳ ಹಿಂದೆ ಇಂತಹ ಕಥೆಗಳು ಇವೆ.

◆ **ಹೊಸತಲೆಮಾರಿಗೆ ಏನನ್ನು ಹೇಳಬಯಸುವಿರಿ.**

ಯಾವುದೇ ಕೆಲಸವನ್ನು ಆನಂದದಿಂದ, ಮನಃಪೂರ್ತಿಯಾಗಿ ಮಾಡಿರಿ. ಸರಿತಪ್ಪುಗಳ ಲೆಕ್ಕಾಚಾರ ಮಾಡುತ್ತಾ ಕೂರದೇ, ಯಾವುದೇ ಕೆಲಸವನ್ನಾದರೂ ಮಾಡುತ್ತಾ ಸಾಗಬೇಕು ಎಂದು ಹೇಳುತ್ತೇನೆ. ●